**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ217/2018</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **25.05.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ ಪಾಟಿ ಸವಾಲುಃ** ಪ್ರತಿವಾದಿ ಪರ ಶ್ರೀ ಬಿ.ಎಂ.ಎನ್ ವಕೀಲರಿಂದಃ</u>

ದಾವಾ ಸ್ವತ್ತುಗಳ ಪಹಣಿ ಪತ್ರಿಕೆಯಲ್ಲಿ ಯಾರು ಹೆಸರುಗಳು ನಮೂದು ಇರುತ್ತವೆ ಎನ್ನುವುದನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.**69/9** ರ **2** ಗುಂಟೆ ಆಸ್ತಿಯು ಸಣ್ಣನಂಜನ ಮಾದರವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.**68/16** ರ ಆಸ್ತಿಯ ಖಾತೆ ಮಾದನಾಯಕರವರ ಹೆಸರಿನಲ್ಲಿ ಮತ್ತು ಸರ್ವೆ ನಂ.**216/2** ರ ಆಸ್ತಿಯ ಖಾತೆಗಳು ಮಾದನಾಯಕ ಮತ್ತು ಶಿವರಾಮರವರ ಹೆಸರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ನಾನು ಓದಿಲ್ಲದ ಕಾರಣ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತಿರುವ ನನ್ನ ತಂದೆಯ ಸ್ವತ್ತುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

<u>ಮರುವಿಚಾರಣೆ ಇಲ್ಲಃ</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**